**OS 07/2021**

**<u>ಪಿಡಬ್ಲ್ಯೂ: 1</u>**

**<u>ದಿಃ 01-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ಶ್ರೀ. ಎಂ ಟಿ ಎಸ್ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದಃ</u>**

ನಾನು, ನನ್ನ ಸಹೋದರ ಮತ್ತು ನನ್ನ ತಂದೆ ವಿಭಾಗ ಮಾಡಿಕೊಳ್ಳುವುದಕ್ಕೂ ಮುಂಚೆ ನನ್ನ ತಂದೆಯ ಹೆಸರಿಗಿದ್ದ ಆಸ್ತಿಗಳ ವಿವರ ಹೇಳಲಾಗುವುದಿಲ್ಲ. ನನ್ನ ತಂದೆ ವೀರಪ್ಪರವರಿಗೆ ರುದ್ರಪ್ಪ ಅಂತಾ ಸಹೋದರ ಇದ್ದ ಎಂದರೆ ಸರಿ. ಮುಂಚೆ ನನ್ನ ತಂದೆ ವೀರಪ್ಪ ಮತ್ತು ಅವರ ಸಹೋದರ ರುದ್ರಪ್ಪ ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿ. ನನ್ನ ತಂದೆ ವೀರಪ್ಪ ಮತ್ತು ಅವರ ಸಹೋದರ ರುದ್ರಪ್ಪರವರು ಆಸ್ತಿ ವಿಭಾಗ ಮಾಡಿಕೊಂಡಿದ್ದು ಆ ಬಗ್ಗೆ ದಾಖಲೆ ಇದೆ. 7 ನೇ ಪ್ರತಿವಾದಿ ತನ್ನ ಕೌಂಟರ್ ಕ್ಲೇಮ್ ಪ್ರತಿವಾದ ಪತ್ರದಲ್ಲಿ ಕಾಣಿಸಿದ ಎಲ್ಲಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. 2008 ರಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಮಧ್ಯೆ ಅಂತಿಮವಾಗಿ ನ್ಯಾಯಾಲಯದಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ ಆದೇಶ ಆಗಿ ವಿಭಾಗ ಆಗಿತ್ತು. 2005 ರಿಂದ 2008 ರ ಅವಧಿಯಲ್ಲಿ ನನ್ನ ತಂದೆಗೆ ಇದ್ದ ಮೂರು ಜನ ಹೆಣ್ಣು ಮಕ್ಕಳನ್ನು ಸದರಿ ಪ್ರಕರಣದಲ್ಲಿ ಸೇರಿಸಿರಲಿಲ್ಲ. ನನ್ನ ಸಹೋದರಿಯರು ಅವರ ಪಿತ್ರಾರ್ಜಿತ ಆಸ್ತಿಗಳಲ್ಲಿ ತಮ್ಮ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿಲ್ಲ.

ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ಈ ಮುಂಚೆ ನಮ್ಮ ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದರು. ನಾನು ಮತ್ತು ನನ್ನ ಸಹೋದರ ನ್ಯಾಯಾಲಯದಲ್ಲಿ ವಿಭಾಗ ಕೋರಿ ಪ್ರಕರಣ ದಾಖಲಿಸಿದ ನಂತರ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿದ್ದೆವು. ಹಾಗೆ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾ್ರಂಭಿಸಿದಾಗ ನನ್ನ ತಂದೆ ಮತ್ತು ನನ್ನ ತಾಯಿ ನನ್ನ ಜತೆ ವಾಸ ಇದ್ದರು ಎಂದರೆ ಸರಿ. ನನ್ನ ತಂದೆಗೆ 2018 ರಲ್ಲಿ ಸುಮಾರು 86 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ ತಂದೆ 2019 ರಲ್ಲಿ ಮರಣ ಹೊಂದಿದ್ದರು ಎಂದರೆ ಸರಿ. ನನ್ನ ತಂದೆ 2019 ರಲ್ಲಿ ಮರಣ ಹೊಂದುವ 15 ವರ್ಷಗಳ ಮುಂಚೆ ಅವರಿಗೆ ಪಾರ್ಶ್ವ ವಾಯು ಖಾಯಿಲೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ಸಹೋದರ 7 ನೇ ಪ್ರತಿವಾದಿ ದಾಖಲಿಸಿದ ಪ್ರಕರಣದಲ್ಲಿ ನಾನು ಒಬ್ಬನೇ ನ್ಯಾಯಾಲಯದಲ್ಲಿ ಓಡಾಡುತ್ತಿದ್ದೆ ಎಂದರೆ ಸರಿ. 2008 ರಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ

ಕೊನೆಯದಾಗಿ ನ್ಯಾಯಾಲಯದಲ್ಲಿ ಅಂತಿಮ ಡಿಕ್ರಿ ಆದೇಶ ಆದ ದಿನ ನಾನು ಮತ್ತು 7 ನೇ ಪ್ರತಿವಾದಿ ನಮ್ಮ ತಂದೆಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೇವು ಎಂದರೆ ಸರಿ. 2008 ರಲ್ಲಿ ನನ್ನ ತಂದೆ ಸ್ವತಂತ್ರವಾಗಿ ನ್ಯಾಯಾಲಯಕ್ಕೆ ಬರಲು ಆಗದೇ ಇದ್ದ ಕಾರಣ ನಾನು ಮತ್ತು ನನ್ನ ಸಹೋದರ 7 ನೇ ಪ್ರತಿವಾದಿ ಸೇರಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೆವು ಎಂದರೆ ಸರಿಯಲ್ಲ. 2008 ರಲ್ಲಿ ನನ್ನ ತಂದೆ ಪಾರ್ಶ್ವ ವಾಯು ಖಾಯಿಲೆಯಿಂದ ತುಂಬಾ ಬಳಲಿದ್ದರು ಎಂದರೆ ಸರಿಯಲ್ಲ. 2008 ರ ನಂತರ ನನ್ನ ತಂದೆ ನಮ್ಮೊಂದಿಗೆ ಇದ್ದ ಕಾಲದಲ್ಲಿ ನಮ್ಮ ಕುಟುಂಬದ ಯಜಮಾನಿಕೆಯನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ.

2008 ರಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ ಆದ ಅಂತಿಮ ಡಿಕ್ರಿ ಆದೇಶದಲ್ಲಿ ಈ ಪ್ರಕರಣದಲ್ಲಿ ಕಾಣಿಸಿದ ಎಲ್ಲಾ ದಾವ ಆಸ್ತಿಗಳು ಮತ್ತು 7 ನೇ ಪ್ರತಿವಾದಿ ತನ್ನ ಕೌಂಟರ್ ಕ್ಲೇಮ್ ನಲ್ಲಿ ಕಾಣಿಸಿದ ಆಸ್ತಿಗಳು ನನ್ನ ತಂದೆಯ ಭಾಗಕ್ಕೆ ಬಂದಿದ್ದವು ಎಂದರೆ ಸರಿ. 2008 ರಲ್ಲಿ ನನ್ನ ತಂದೆಗೆ ಬಂದ ಆಸ್ತಿಗಳೆಲ್ಲವನ್ನು ನನ್ನ ತಂದೆ ನನ್ನೊಂದಿಗೆ ವಾಸ ಇದ್ದ ಕಾರಣ ನಾನೇ ಸಾಗುವಳಿ ಮಾಡುತ್ತಿದ್ದೆ ಎಂದರೆ ಸರಿ. ವಿಭಾಗ ಆದ ನಂತರ ನನ್ನ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರ ಹೆಸರಿಗೆ ದಾಖಲೆ ಬದಲಾವಣೆ ಮಾಡಲು ನಾನೇ ಓಡಾಡಿದ್ದೆ ಎಂದರೆ ಸರಿ. ನನ್ನ ತಂದೆ ತಾಯಿ ಅವರ ಹೆಣ್ಣು ಮಕ್ಕಳ ಮೇಲೆ ಯಾವುದೇ ದ್ವೇಷ ಮತ್ತು ಹೆಚ್ಚು ಕಡಿಮೆ ಭಾವನೆ ಇದ್ದಿರಲಿಲ್ಲ. ನನ್ನ ತಂದೆ ಅವರ ಮೊಮ್ಮಕ್ಕಳ ಮೇಲೆ ಸಮಾನ ಭಾವನೆ ಹೊಂದಿದ್ದರು ಎಂದರೆ ಸರಿ. ಎಫ್ ಡಿ ಪಿ ಪ್ರಕರಣದಲ್ಲಿ ನನ್ನ ತಂದೆ ಅವರ ಭಾಗಕ್ಕೆ ಬಂದ ಆಸ್ತಿಗಳ ವಿಷಯವನ್ನು ನನ್ನ ಸಹೋದರಿಯರಿಗೆ ನನ್ನ ತಂದೆಯೇ ತಿಳಿಸಿದ್ದರು. 2018 ರಲ್ಲಿ ನನ್ನ ತಂದೆಗೆ 95 ವರ್ಷ ವಯಸ್ಸು ಆಗಿದ್ದ ಕಾರಣ ಯಾವುದೇ ಕಛೇರಿಗೆ ಓಡಾಡುವ ದೈಹಿಕ ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. 2008 ರ ನಂತರ ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಅವರ ಮಾನಸಿಕ ಸ್ಥಿತಿ ಸಮರ್ಪಕ ಆಗಿರಲಿಲ್ಲ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿ ಭಾಗ ಕೋರಿ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿದ ನಂತರ ನನ್ನ ಮತ್ತು 7 ನೇ ಪ್ರತಿವಾದಿಯ ಬಾಂಧವ್ಯ ಸರಿ ಇರಲಿಲ್ಲ ಮತ್ತು ಪರಸ್ಪರ ಮಾತನಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ 7 ನೇ ಪ್ರತಿವಾದಿಯ ಮೇಲೆ

ಯಾವುದೇ ದ್ವೇಷ ಮತ್ತು ಅಸಮಾಧಾನ ಇದ್ದಿರಲಿಲ್ಲ ಎಂದರೆ ಸರಿ. ನನ್ನ ತಂದೆ 5 ನೇಪ್ರತಿವಾದಿಯನ್ನು ಆದರದಿಂದ ಮತ್ತು ಪ್ರೀತಿಯಿಂದ ಕಾಣುತ್ತಿದ್ದರು ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**OS 07/2021**

**ಪಿಡಬ್ಲ್ಯೂ: 1**

**ದಿಃ 22-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ. ಎಂ ಹೆಚ್ ಜೆ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ವಾದಿಯು ಈ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾದವು.

| | |
|---|---|
| ನಿ ಪಿ 1 | ಎ.ವೀರಪ್ಪ ರವರ ಮರಣ ಪ್ರಮಾಣ ಪತ್ರ. |
| ನಿ ಪಿ 2 | ವಂಶವೃಕ್ಷದ ದೃ.ಪತ್ರ. |
| ನಿ ಪಿ 3 | ವಂಶವೃಕ್ಷದ ಪ್ರಮಾಣ ಪತ್ರ. |
| ನಿ ಪಿ 4 | ಅಸಲು ದಾವ ನಂ. 365/2001 ರ ಡಿಕ್ರಿಯ ದೃ.ಪ್ರತಿ. |
| ನಿ ಪಿ 5 | ಎಫ್.ಡಿ.ಪಿ.10/2005 ರ ಪ್ರಕರಣದಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃ.ಪ್ರತಿ. |
| ನಿ ಪಿ 6 | ಎಫ್.ಡಿ.ಪಿ.10/2005 ರ ಪ್ರಕರಣದ ಅಂತಿಮ ಡಿಕ್ರಿ ದಾಖಲೆ. |
| ನಿ ಪಿ 7 | ಸ.ನಂ.200/4 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 8 | ಸ.ನಂ.86/13 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 9 | ಸ.ನಂ.86/16 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 10 | ಆಸ್ತಿ ಖಾತೆ ನಂ.217 ಖಾತೆಯ ಡಿಸಿಬಿ ರಿಜಿಸ್ಟರ್ ದಾಖಲೆ. |
| ನಿ ಪಿ 11 | ಎಂ.ಆರ್.ನಂ.7/18-19 ರ ದಾಖಲೆಯ ದೃ.ಪ್ರತಿ. |
| ನಿ ಪಿ 12 | ದಿಃ 29/08/2019 ರಂದು ಗ್ರಾಮ ಲೆಕ್ಕಾಧಿಕಾರಿ ಸ್ವೀಕೃತ ಅರ್ಜಿ. |
| ನಿ ಪಿ 13 | ದಿಃ 07/12/2020 ರಂದು ಗ್ರಾಮ ಲೆಕ್ಕಾಧಿಕಾರಿ ಸ್ವೀಕೃತ ಅರ್ಜಿ. |
| ನಿ ಪಿ 14 | ದಿಃ 07/12/2020 ರಂದು ಗ್ರಾಮ ಪಂಚಾಯಿತಿ ಕೋಗಲೂರು ರವರು ನೀಡಿದ ಹಿಂಬರಹ. |
| ನಿ ಪಿ 15 | ವಾದಿಯ ಆಧಾರ್ ಕಾರ್ಡ್‌ನ ನೋಟರಿ ಪ್ರತಿ. |
| ನಿ ಪಿ 16 | ಸಾಕ್ಷಿಗೆ ಪ್ರಕರಣ ನಡೆಸಲು ನೀಡಿದ ಜಿ ಪಿ ಎ ದಾಖಲೆ. |
| ನಿ ಪಿ 17 | ಸಾಕ್ಷಿಯ ಆಧಾರ್ ಕಾರ್ಡ್. |

**(ಶ್ರೀ. ಎಂ ಟಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.